MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 28-1-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## 2022 ರಲ್ಲಿ ಇಂಡೋನೇಶಿಯಾದ ಪಾಮೆಣ್ಣೆ ರಫ್ತು ಇಳಿಕೆ

ಉತ್ಪಾದನೆ ಇಳಿಕೆ, ವರ್ಷದ ನಡುವೆ ರಫ್ತು ನಿರ್ಬಂಧ ಇವುಗಳಿಂದ 2022 ರಲ್ಲಿ ಇಂಡೋನೇಶಿಯಾದ ಪಾಮೆಣ್ಣೆ ರಫ್ತು ಇಳಿಕೆಯಾಗಿದೆಯೆನ್ನಲಾಗಿದೆ. ಈ ವಾರದಲ್ಲಿ ಮಲೇಶೀಯಾದ ಪಾಮೆಣ್ಣೆ ಫ್ಯೂಚರ್ ದರ ಸರಾಸರಿ ಇಳಿಕೆಯಾಗಿದೆ. 2023 ರ ನಾಲ್ಕನೇ ಒಂದಂಶ ಭಾಗದಲ್ಲಿ ಭಾರತದ ಪಾಮೆಣ್ಣೆ ಆಮದು ಇಳಿಕೆಯಾಗಬಹುದೆನ್ನಲಾಗಿದೆ.

## ಕೇರಳ ಸರಕಾರದಿಂದ ಕಚ್ಚಾ ಗೋಡಂಬಿ ಖರೀದಿಗೆ ಯೋಜನೆ

ಕೇರಳ ರಾಜ್ಯ ಸರಕಾರ ರಾಜ್ಯದ ಕಚ್ಚಾ ಗೋಡಂಬಿ ಖರೀದಿಗೆ ವಿವಿಧ ಸಹಕಾರಿ ಸಂಘಗಳ ಸಹಯೋಗದಿಂದ ಯೋಜನೆ ರೂಪಿಸಿದೆಯೆನ್ನಲಾಗಿದೆ. ಮಾರುಕಟ್ಟೆ ದರದಲ್ಲಿ ಕಚ್ಚಾ ಗೋಡಂಬಿ ಖರೀದಿಸಲಿದೆಯೆನ್ನಲಾಗಿದೆ.

## ಅವಧಿಗೆ ಮೊದಲೇ ಸಕ್ಕರೆ ಉತ್ಪಾದನೆ ನಿಲುಗಡೆ

ಭಾರತದ ಸಕ್ಕರೆ ಉತ್ಪಾದನಾ ಕಾರ್ಖಾನೆಗಳಲ್ಲಿ ಅವಧಿಗೆ ಮುಂಚಿತವಾಗಿ ಉತ್ಪಾದನೆ ನಿಲುಗಡೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ. ಪ್ರತಿಕೂಲ ಹವಾಮಾನದ ಪರಿಣಾಮವಾಗಿ ಕಬ್ಬು ಉತ್ಪಾದನೆ ಇಳಿಕೆಯಿಂದ, ಪ್ರಮುಖ ಉತ್ಪಾದಕ ರಾಜ್ಯ ಮಹಾರಾಷ್ಟ್ರದಲ್ಲಿ ಅವಧಿಗೆ 45-60 ದಿನ ಮುಂಚಿತವಾಗಿ ಉತ್ಪಾದನೆ ನಿಲುಗಡೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಹಿಂದಿನ ಉತ್ಪಾದನೆ ಅಂದಾಜಿನಿಂದ (13.8 ಮಿಲಿಯನ್ ಟನ್) 1 ಮಿಲಿಯನ್ ಟನ್ ಇಳಿಕೆಯಾಗಿ 12.8 ಮಿಲಿಯನ್ ಟನ್ ಸಕ್ಕರೆ ಮಹಾರಾಷ್ಟ್ರದಲ್ಲಿ ಈ ವರ್ಷ ಉತ್ಪಾದನೆಯಾಗುವ ನಿರೀಕ್ಷೆಯಿದೆಯೆನ್ನಲಾಗಿದೆ. ಉತ್ಪಾದನೆ ಇಳಿಕೆಯಿಂದ ರಫ್ತು ಇಳಿಕೆಯಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ದೇಶೀ ಬೇಡಿಕೆ ಹೆಚ್ಚಳವಾದರೆ ದರವೂ ಹೆಚ್ಚಳವಾಗುವ ಸಾಧ್ಯತೆಯಿದೆ.